ದಿನಾಂಕಃ **06-04-2022**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ.ಕೆ.ಪಿ. ವಕೀಲರಿಂದಃ**

ಅಪಘಾತವಾದ ತಕ್ಷಣ ನನಗೆ ಜ್ಞಾನ ತಪ್ಪಿದ್ದರಿಂದ ಯಾರು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಗೊತ್ತಾಗಿರುವುದಿಲ್ಲ. ನನಗೆ ಪ್ರಜ್ಞೆ ಬಂದ ನಂತರ ಮಲ್ಲೇಶ ಮತ್ತು ನನ್ನ ಅಣ್ಣ ನನ್ನನ್ನು ಆಸ್ಪತ್ರೆಗೆ ಸೇರಿಸಿದ್ದರು ಎಂದು ಕೇಳಿ ಗೊತ್ತಾಗಿದೆ. ನರಸೀಪುರ ಆಸ್ಪತ್ರೆಗೆ ಹೋದ ದಿವಸವೇ ರಾತ್ರಿ ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ನರಸೀಪುರ ಆಸ್ಪತ್ರೆಗೆ ದಾಖಲಾದ ತಕ್ಷಣ ಅಪಘಾತ ಹೇಗಾಯಿತು ಎಂದು ವೈದ್ಯರಿಗೆ ಹೇಳಿರುತ್ತೇನೆ. ನಾನು ವೈದ್ಯರ ಬಳಿಗೆ ಕೆಎ-55-ಜೆ-5824 ವಾಹನದಿಂದ ಅಪಘಾತವಾಗಿದೆ ಎಂದು ವೈದ್ಯರಿಗೆ ಹೇಳಿರುತ್ತೇನೆ. ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯವರು ತಮಗೆ ಚಿಕಿತ್ಸೆ ಕೊಡಲು ಆಗುವುದಿಲ್ಲ ಎಂದ ಕಾರಣ ಪ್ರಜ್ವಲ್ ಆಸ್ಪತ್ರೆಗೆ ಹೋದೆವು.

ಅಪಘಾತದ ಸಮಯದಲ್ಲಿ ನನ್ನ ಅಣ್ಣನಾದ ಮಂಜುನಾಥ ಈತನು ವಾಹನ ಓಡಿಸುತ್ತಿದ್ದನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನಾನೇ ವಾಹನ ಓಡಿಸುತ್ತಿದ್ದೆನು ಎಂದರೆ ಸರಿಯಲ್ಲ. ನನಗೆ ಅಪಘಾತವು ಕೆಎ-09-6674 ಪ್ಯಾಶನ್ ಪ್ರೊ ವಾಹನದಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನರಸೀಪುರ ಆಸ್ಪತ್ರೆಗೆ ಹೋದಾಗ ನಾನೇ ಕೆಎ-09-6674 ವಾಹನವನ್ನು ಓಡಿಸುತ್ತಿದ್ದಾಗ ನಾನೇ ಬಿದ್ದಿದ್ದೇನೆ ಎಂದು ವೈದ್ಯರು ನಮೂದು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ಅಣ್ಣ ಅಪಘಾತ ಸ್ಥಳದಲ್ಲಿ ಇರಲೇ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಕೆಎ-55-ಜೆ-5824 ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ.

ಅಪಘಾತವಾದ ತಕ್ಷಣ ನರಸೀಪುರ ಆಸ್ಪತ್ರೆಯಲ್ಲಿರುವಾಗ ನನ್ನ ಆರೋಗ್ಯ ಸರಿಯಾಗಿಯೇ ಇತ್ತು ಎಂದರೆ ಸರಿಯಲ್ಲ. ನನ್ನನ್ನು ನರಸೀಪುರ ಆಸ್ಪತ್ರೆಗೆ ಮಹೇಶ ಎನ್ನುವ ವ್ಯಕ್ತಿ ಸೇರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಓಡಿಸುತ್ತಿದ್ದ ಕೆಎ-09-6674 ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸಾಕ್ಷಿದಾರರು ನಾನು ಆ ವಾಹನವನ್ನು ತೆಗೆದುಕೊಂಡು ಹೋಗಿಯೇ ಇಲ್ಲ ಎನ್ನುತ್ತಾರೆ. ನಾನು ಓಡಿಸುತ್ತಿದ್ದ ವಾಹನಕ್ಕೆ ವಿಮೆ ಇಲ್ಲದಿರುವ ಕಾರಣ ವಿಮೆ ಇರುವ ನನ್ನ ಅಣ್ಣನ ವಾಹನವನ್ನು ಸೇರಿಸಿ ಮತ್ತು ಚಾಲನಾ ಪರವಾನಿಗೆ ಇರುವ ನನ್ನ ಅಣ್ಣನನ್ನು ವಾಹನ ಸವಾರನೆಂದು ಸುಳ್ಳಾಗಿ ತೋರಿಸಿ ವಿಳಂಬವಾಗಿ ಪೊಲೀಸರಿಗೆ ದೂರು ನೀಡಲಾಗಿದೆ ಎಂದರೆ ಸರಿಯಲ್ಲ.

ನಾನು ಪ್ರಜ್ವಲ್ ಆಸ್ಪತ್ರೆಯಲ್ಲಿ 5-8 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಅಪಘಾತದಲ್ಲಿ ನನ್ನ ಎಡಗೈ ಮತ್ತು ಎಡ ಕಾಲಿಗೆ ಗಾಯಗಳಾಗಿದ್ದವು. ನನ್ನ ಗಾಯಗಳಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ನಾನು ನರಸೀಪುರದಲ್ಲಿ ಮೊಬೈಲ್ ಮಾರಾಟ ಅಂಗಡಿಯ ಮಾಲೀಕನಾಗಿರುತ್ತೇನೆ. ನಾನು ಅಂಗಡಿ ನಡೆಸಲು ಪುರಸಭೆಯಿಂದ ಪರವಾನಿಗೆಯನ್ನು ಪಡೆದಿರಲಿಲ್ಲ. ನಾನು ವ್ಯಾಪಾರದಿಂದ ಮಾಸಿಕ ರೂ.25,000/- ಆದಾಯ ಗಳಿಸುತ್ತಿದ್ದೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈಗಲೂ ಕೂಡ ಮೊಬೈಲ್ ವ್ಯಾಪಾರವನ್ನೇ ಮಾಡುತ್ತಿದ್ದೇನೆ, ಆದರೆ 7-8 ಸಾವಿರ ರೂಪಾಯಿ ಮಾಸಿಕ ವರಮಾನ ಗಳಿಸುತ್ತಿದ್ದೇನೆ. ಅಪಘಾತಕ್ಕಿಂತ ಮುಂಚೆ ನನಗೆ ಎಷ್ಟು ಆದಾಯವಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಕೊಟ್ಟಿಲ್ಲ ಎಂದರೆ ನಿಜ. ನನಗೆ ಯಾವುದೇ ಆದಾಯವಿಲ್ಲವಾದರೂ ಸಹ ಸುಳ್ಳು ಸೃಷ್ಟನೆ ಮಾಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲೆಗಳನ್ನು ನೋಡಿರುತ್ತೇನೆ.

ನನ್ನ ಅಣ್ಣ ದ್ವಿಚಕ್ರ ವಾಹನವನ್ನು ಜೋರಾಗಿ ಓಡಿಸಿಕೊಂಡು ಹೋಗುತ್ತಿದ್ದಾಗ ನಾಯಿ ಅಡ್ಡ ಬಂದ ಕಾರಣ ವಾಹನ ಆಯತಪ್ಪಿ ನಾವಿಬ್ಬರೂ ಕೆಳಗೆ ಬಿದ್ದೆವು. ಅಪಘಾತದಲ್ಲಿ ನನ್ನ ಅಣ್ಣನಿಗೆ ಕೈಗೆ ಮತ್ತು ಕಾಲಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ನನ್ನ ಅಣ್ಣ ತಿ.ನರಸೀಪುರ ಸರ್ಕಾರಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಪಡೆದಿರುತ್ತಾರೆ.

ಅಪಘಾತವಾದ ನಂತರ ಮಹೇಶ್ ಎನ್ನುವವರು ಪೊಲೀಸರಿಗೆ ದೂರು ನೀಡಿರುತ್ತಾರೆ ಎಂದು ನನಗೆ ನಂತರ ತಿಳಿದುಬಂದಿರುತ್ತದೆ. ನನ್ನ ಅಣ್ಣನು ಪೊಲೀಸರಿಗೆ ದೂರನ್ನು ನೀಡಿರುವುದಿಲ್ಲ. ನಾನು ಬಿ.ಕಾಂ.ಪದವಿಯವರೆಗೆ ಓದಿರುತ್ತೇನೆ. ನಾನು ಮತ್ತೆ ಹೇಳುತ್ತೇನೆ ಅಪಘಾತದ ಬಗ್ಗೆ ಯಾರು ದೂರು ನೀಡಿರುತ್ತಾರೆ ಎಂದು ನಾನು ತಿಳಿದುಕೊಂಡಿಲ್ಲ. ಕೆಎ-55-ಜೆ-5824 ವಾಹನವನ್ನು ಪೊಲೀಸರಿಗೆ ನನ್ನ ಅಣ್ಣ ಕೊಟ್ಟಿರಬಹುದು. ಸದರಿ ವಾಹನವನ್ನು ನಾನೇ ತೆಗೆದುಕೊಂಡು ಹೋಗಿ ಪೊಲೀಸರಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ನಾನು ಹೇಳುವ ಕೆಎ-55-ಜೆ-5824 ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನಕ್ಕೆ ವಿಮೆ ಇರುವುದರಿಂದ 2 ನೇ ಎದುರುದಾರರಿಂದ ಪರಿಹಾರ ಹಣವನ್ನು ದೋಚಿಕೊಳ್ಳಬೇಕೆಂಬ ದುರುದ್ದೇಶದಿಂದ ಸದರಿ ವಾಹನವನ್ನು ಪ್ರಕರಣದಲ್ಲಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ.

ಅಪಘಾತಕ್ಕಿಂತ ಮುಂಚೆ ನನಗೆ ಸೇರಿದ ದ್ವಿಚಕ್ರ ವಾಹನ ಸಂಖ್ಯೆ ಕೆಎ-09-6674 ವಾಹನವನ್ನು ಹೊಂದಿದ್ದೆನು. ಅಪಘಾತದ ಸಮಯದಲ್ಲಿ ನನ್ನ ವಾಹನ ಸಂಖ್ಯೆ ಕೆಎ-09-6674 ವಾಹನಕ್ಕೆ ವಿಮೆ ಜಾರಿಯಲ್ಲಿರಲಿಲ್ಲ ಎಂದರೆ ನಿಜ. ನನಗೆ ವಾಹನ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ವಾಹನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ನನ್ನ

ತಪ್ಪಿನಿಂದ ಮತ್ತು ನನ್ನ ವಾಹನದಿಂದ ಅಪಘಾತವಾಗಿದ್ದರೂ ಸಹ ನನ್ನ ಅಣ್ಣನ ವಾಹನವನ್ನು ಮತ್ತು ಆತನನ್ನು ಪ್ರಕರಣದಲ್ಲಿ ಸೇರಿಸಿ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಮೇರೆಗೆ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ-55-ಜೆ-5824 ವಾಹನ ಅಪಘಾತದಲ್ಲಿ ಭಾಗಿಯಾಗಿಲ್ಲವಾದ ಕಾರಣ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.